PlanetRead
Literacy for a Billion

Movie: Amrutha Varshini
Year: 1997
Song: Ee Sundara Beladingala
Lyricist: K Kalyan

ಈ ಸುಂದರ ಬೆಳದಿಂಗಳ
ಈ ತಂಪಿನ ಅಂಗಳದಲಿ
ನನ ನಿನ ನಡುವಿನಲೀ
ಈ ಸುಂದರ ಬೆಳದಿಂಗಳ
ಈ ತಂಪಿನ ಅಂಗಳದಲಿ
ಹೃದಯದ ತಾಳದಲೀ
ಮೌನವೇ ರಾಗವೂ
ಉಸಿರೇ ಭಾವವೂ
ನಿನ ಈ ನಗೆಯ
ಸವಿ ಶೃತಿಯಲ್ಲಿ ಹೋ ಹೋ
ಈ ಸುಂದರ ಬೆಳದಿಂಗಳ
ಈ ತಂಪಿನ ಅಂಗಳದಲಿ
ನನ ನಿನ ನಡುವಿನಲೀ

ದಿನಾ
ದಿನಾ ಕ್ಷಣಾ ಕ್ಷಣಾ ಚಿನಾ ನನ
ನಿನ ಹಾಡಲಿ ಕುಣಿಸಿರುವೇ
ಮನಾ ಮನಾ ನಗೊ ತರಾ
ಕಣ್ಣಂಚಲಿ ನಗಿಸಿರುವೇ
ಒಲವೇ..........
ಒಲವೇ ನಿನ ನಲಿವೊಂದೆ
ವರವೆನುತ ನಾ ನಲಿವೇ
ಒಲವೇ ನಿನ ಗೆಲುವೊಂದೆ
ಬಲವೆನುತ ನಾ ಬೆರೆವೇ
ನನ ಎದೆಯೊಳಗಿನ
ಸ್ವರ ನುಡಿಸುವ ಕೈಗಳೆ ನಿನದು
ನಿನ ಕೈಗಳ ಜೊತೆ ಕೈ ಸೇರಿಸಿ
ಜಗವ ಕೊಳ್ಳೊ ಮನಸು ನನದು
ಈ ಸುಂದರ
ಈ ಸುಂದರ ಬೆಳದಿಂಗಳ
ಈ ತಂಪಿನ ಅಂಗಳದಲಿ
ನನ ನಿನ ನಡುವಿನಲೀ

ಸಮಾ
ಸಮಾ ಸರಿಗಮಾ ಸಮಾಗಮಾ
ಇಂಥ ವಿಸ್ಮಯ ಇದೆ ಮೊದಲೂ
ಘಮಾ ಘಮಾ ಎದೆ ಎಲ್ಲ
ಏನೊ ಮಾತು ಬರಿ ತೊದಲು
ಉಸಿರೇ...........
ಉಸಿರೇ ನಿನ ಉಸಿರಾಗಿ
ಈ ಉಸಿರಾ ಬರೆದಿರುವೇ
ನಮ್ಮ ಹಾಡಿಗೆ ಹೆಸರಾಗಲಿ
ಕಾವೇರಿ ಕಲರವವೇ
ನಿನ ನೆರಳಿನ ಸನಿಸನಿಹಕೆ
ನನ ಕೊರಳಿನ ದನಿ ಹರಿಸಿ ಹರಿಸಿ
ನಿನ ಕನಸಿಗೆ ಹೊಸ ಹೆಸರನು
ಬರೆಸಿ ಮೆರೆಸಿ ರಮಿಸಲಿರುವೆ
ಈ ಸುಂದರ
ಈ ಸುಂದರ ಬೆಳದಿಂಗಳ
ಈ ತಂಪಿನ ಅಂಗಳದಲಿ

ನನ ನಿನ ನಡುವಿನಲೀ
ಈ ಸುಂದರ ಬೆಳದಿಂಗಳ
ಈ ಕಂಪಿನ ಅಂಗಳದಲಿ
ಹೃದಯದ ತಾಳದಲೀ

ಮೌನವೇ ರಾಗವ್ರೊ
ಉಸಿರೇ ಭಾವವ್ರೊ
ನಿನ ಈ ನಗೆಯ
ಸವಿ ಶೃತಿಯಲ್ಲಿ ಹೋ ಹೋ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*